# ಶಾಲೆಗಳು ಮತ್ತು ಯೋಗಕ್ಷೇಮ | ಸಂವಾದದ ಸಂಸ್ಕೃತಿಯನ್ನು ರೂಪಿಸುವುದು

ಅರುಣಾ ಜ್ಯೋತಿ ಮತ್ತು ಶೋಭಾ ಎಲ್. ಕವೂರಿ

ಸಾಮಾನ್ಯವಾಗಿ ವಿದ್ಯಾರ್ಥಿಗಳು ತಮ್ಮ ಗಣನೀಯ ಸಮಯವನ್ನು ಶಾಲೆಯಲ್ಲಿ ಕಳೆಯುತ್ತಾರೆ ಮತ್ತು ಶಾಲೆಯ ಅನುಭವ ಅವರ ಜೀವನದ ಮೇಲೆ ಗಾಢವಾದ ಪರಿಣಾಮವನ್ನು ಬೀರುತ್ತದೆ. ಹೊರನೋಟಕ್ಕೆ ಶಾಲೆಗಳು ವಿದ್ಯಾರ್ಥಿಗಳ ಯೋಗಕ್ಷೇಮದ ಮೇಲೆ ಪ್ರಭಾವ ಬೀರುವ ಮತ್ತು ಸಮಾಜೋ-ಭಾವನಾತ್ಮಕ ಕಲಿಕೆಯನ್ನು (social-emotional learning) ಉತ್ತೇಜಿಸುವ ವಿಶಿಷ್ಟ ಸ್ಥಾನದಲ್ಲಿವೆ. ಚಿಕ್ಕ ವಯಸ್ಸಿನಿಂದಲೇ ಮಕ್ಕಳಲ್ಲಿ ಸಂಸ್ಕೃತಿಯನ್ನು ಬೆಳೆಸುವ, ಅವರ ಹಿತ ರಕ್ಷಿಸಬಲ್ಲ ಸಂಸ್ಥೆಗಳಾಗುವ ಹೊಣೆಗಾರಿಕೆ ಶಾಲೆಗಳ ಮೇಲಿದೆ. ಶಯ್ನ್' ಅವರು ಹೇಳುವಂತೆ, 'ಸಂಸ್ಕೃತಿ ಎನ್ನುವುದು ಕಾಲಾನುಕ್ರಮದಲ್ಲಿ ಜನರು ಪರಸ್ಪರ ಸಂಬಂಧವನ್ನು ಕಟ್ಟಿಕೊಳ್ಳುತ್ತಾ, ವಿಶ್ವಾಸವನ್ನು ಗಳಿಸುತ್ತಾ ಮತ್ತು ಸಂಘರ್ಷಗಳನ್ನು ನಿವಾರಿಸಿಕೊಳ್ಳುವುದನ್ನು ಕಲಿಯುವ ಪ್ರಕ್ರಿಯೆಯಲ್ಲಿ ಸ್ಥಾಪಿತವಾಗುತ್ತಾ ಹೋಗುತ್ತದೆ'. ಹೀಗಾಗಿ ಶಾಲೆಗಳನ್ನು ಈ ಸಂಸ್ಕೃತಿಯನ್ನು ಎಲ್ಲೆಡೆ ಹರಡಲು ಫಲಾನುಭವಿಗಳು ಒಂದಾಗಿ ಸೇರಿ ಕಾರ್ಯಪ್ರವೃತ್ತರಾಗುವ ಸ್ಥಳಗಳು ಎಂದು ಪರಿಗಣಿಸಬಹುದು. ಇದು ಅಗತ್ಯ ಕೂಡ ಹೌದು ಎಂಬುದು, ನಿರ್ದಿಷ್ಟವಾಗಿ ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಮನದಟ್ಟಾಗಿದೆ.

ಯೋಗಕ್ಷೇಮ (Wellbeing) ಎಂಬುದು ಸರಳವಾಗಿ ಹೇಳುವುದಾದರೆ, ಯಾವುದೇ ವ್ಯಕ್ತಿ ಚೆನ್ನಾಗಿರುವ ಭಾವನೆ ಮತ್ತು ಉತ್ತಮವಾಗಿ ಕಾರ್ಯನಿರ್ವಹಿಸುವ ಇವೆರಡರ ಸಂಯೋಜನೆಯಾಗಿದೆ. ಇದರೊಂದಿಗೆ ಇದು ಸಕಾರಾತ್ಮಕ ಭಾವನೆಗಳು ಹಾಗೂ ಸಂಬಂಧಗಳನ್ನು ಅನುಭವಿಸುವುದು ಮತ್ತು ನಿರ್ದಿಷ್ಟ ಉದ್ದೇಶದ ಈಡೇರಿಕೆಗಾಗಿ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದನ್ನೂ ಒಳಗೊಳ್ಳುತ್ತದೆ. ಇದು 'ಮನಸ್ಸು' ಮತ್ತು 'ಹೃದಯ' ಪರಸ್ಪರ ಒಗ್ಗೂಡುವ ಕ್ರಿಯೆಯಾಗಿದೆ. ನಾವು ಯಾವ ರೀತಿ ಯೋಚಿಸುತ್ತೇವೆಯೋ ಮತ್ತು ನಮ್ಮ ಮನಸ್ಸು ಒಂದು ಘಟನೆಯನ್ನು ಹೇಗಿರಬೇಕು ಎಂದು ಕಲ್ಪಿಸಿಕೊಳ್ಳುತ್ತದೆಯೋ ಅದೇ ರೀತಿ ನಾವು ಭಾವಿಸುತ್ತೇವೆ. ಫ್ರೆಂಚ್ ತತ್ತ್ವಜ್ಞಾನಿ ಮತ್ತು ಗಣಿತಜ್ಞ ರೆನೆ ಡೆಕಾರ್ಟ್ (1596–1650) ಮುಂದಿಟ್ಟ Cogito, ergo sum, (ಈ ಲ್ಯಾಟಿನ್ ಪದಗಳನ್ನು 'ನಾನು ಯೋಚಿಸುತ್ತೇನೆ, ಹಾಗಾಗಿ ನಾನಿರುವೆ' ಎಂಬುದಾಗಿ ಅನುವಾದಿಸುತ್ತಾರೆ. ಡೆಕಾರ್ಟ್‌ನ ಹೆಚ್ಚಿನ ತಾತ್ತ್ವಿಕ ಚಿಂತನೆಯು, ಮನಸ್ಸು ಮತ್ತು ದೇಹದ ನಡುವಿನ ಸಂಪರ್ಕದ ಬಗ್ಗೆ ಊಹಿಸಲು ಕಾರಣವಾಯಿತು. ಹಾಗಾದರೆ ಯೋಗಕ್ಷೇಮವು ಕೇವಲ ಮನಸ್ಸಿನ ಸ್ಥಿತಿಯೇ? ಅದನ್ನು ತರ್ಕಬದ್ಧವಾಗಿ ಪರಿಶೀಲಿಸಬೇಕೇ? ಸಹಾನುಭೂತಿಯಿಂದಲೇ? ಅಥವಾ ವೈಚಾರಿಕತೆ ಮತ್ತು ಭಾವನಾತ್ಮಕತೆಯು ಒಂದೇ ನಾಣ್ಯದ ಎರಡು ಮುಖಗಳೇ ಅಥವಾ ಅವು ಪರಸ್ಪರ ಒಂದನ್ನೊಂದು ಲೆಕ್ಕಿಸದೆ ಕಾರ್ಯನಿರ್ವಹಿಸುತ್ತವೆಯೇ? ಆದಾಗ್ಯೂ, ನಾವು ಯೋಚಿಸುವುದು ಮತ್ತು ಕಲ್ಪಿಸುವುದು ಭೌತಿಕ ದೇಹ, ಭಾವನೆಗಳು ಮತ್ತು ನಡವಳಿಕೆಯ ಮೇಲೆ ಪ್ರಭಾವ ಬೀರಿದರೆ ಆಗ ಉತ್ತಮ ವ್ಯಕ್ತಿತ್ವವನ್ನು ನಮ್ಮ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕತೆಗಳು ಪರಸ್ಪರ ಒಟ್ಟುಗೂಡುವ ಸ್ಥಿತಿ ಎಂದು ಪರಿಗಣಿಸಬಹುದು.

ಈ ಲೇಖನದಲ್ಲಿ ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ನಿರ್ದಿಷ್ಟ ಪ್ರಶ್ನೆಗಳ ಬಗ್ಗೆ ವಸ್ತುನಿಷ್ಠ ಚಿಂತನೆಯನ್ನು (substantive thinking) ಸುಗಮಗೊಳಿಸಲು ಉದ್ದೇಶಿಸಲಾಗಿದೆ. ಉದಾಹರಣೆಗೆ, ಕುಟುಂಬದ ಬೆಂಬಲದೊಂದಿಗೆ (ಉತ್ತಮ ಜೀವನ ಸ್ಥಿತಿ, ವಸತಿ ಮತ್ತು ಪೌಷ್ಟಿಕ ಆಹಾರಗಳಾಗಿ), ಶಾಲೆಯಲ್ಲಿ ಸಿಗುವ ಪ್ರೋತ್ಸಾಹ ಮತ್ತು ಬೆಂಬಲ ಮಕ್ಕಳಲ್ಲಿ 'ತಾವು ಚೆನ್ನಾಗಿರುವ ಭಾವನೆ'ಗಳನ್ನು ('feeling well') ರೂಪಿಸಲು ಸಾಧ್ಯ ಎಂದು ತೋರಿಸಬಹುದೇ? ಅಥವಾ ಹತ್ತಿರದವರು ಮತ್ತು ಆತ್ಮೀಯರು, ಸ್ನೇಹಿತರು ಮತ್ತು ಶಾಲೆಯಲ್ಲಿ ಅವರನ್ನು ಹೇಗೆ ನಡೆಸಿಕೊಳ್ಳಲಾಗುತ್ತದೆ ಎಂಬುದರ ಮೇಲೆ ಹಿತಕರವಾಗಿರುವ ಪ್ರಜ್ಞೆ ಹುಟ್ಟಿಕೊಳ್ಳುತ್ತದೆಯೇ?

ಈ ಲೇಖನವು ಅಜೀಂ ಪ್ರೇಮ್‌ಜಿ ಶಾಲೆಗಳನ್ನು ಸ್ಥಾಪಿಸುವಾಗ ಉತ್ತಮ ವ್ಯಕ್ತಿತ್ವವನ್ನು ಉತ್ತೇಜಿಸುವಂತಹ ಸಂಸ್ಕೃತಿಯನ್ನು ರೂಪಿಸುವಲ್ಲಿ ಉಂಟಾದ ಅನುಭವದ ಮೇಲೆ ಕೇಂದ್ರಿಕೃತವಾಗಿದೆ. ಫೌಂಡೇಷನ್‌ನ ಶಾಲೆಗಳು ದೈಹಿಕ ಶಿಕ್ಷೆಯನ್ನು ಸಹಿಸುವುದಿಲ್ಲ, ಶಾಲಾ ಜೀವನವು ಸಾಮಾನ್ಯವಾಗಿ ಒಳಗೊಂಡಿರುವ ಉರುಹೊಡೆಯುವ, ಶಿಸ್ತನ್ನು ತರಲು ಬಾಹ್ಯ ಸಂಗತಿಗಳ ಮೇಲೆ ಅವಲಂಬಿಸುವಂತಹ ಅಂಶಗಳನ್ನು ಉತ್ತೇಜಿಸುವುದಿಲ್ಲ, ಮನಸ್ಸು ಮತ್ತು ದೇಹದ ನಡುವಿನ ಸಂಕೀರ್ಣ ಸಂಬಂಧ ಕುರಿತಾದ ಡೆಕಾರ್ಟ್ ಅವರ ಹೇಳಿಕೆ– ಈ ನಿರೂಪಣೆಗೆ ಸೂಕ್ತವಾದ ಮುನ್ನುಡಿಯನ್ನು ನಮಗೆ ಒದಗಿಸುತ್ತದೆ.

## ಶಾಲಾ ಸಂಸ್ಕೃತಿ

'ನಿರ್ದಿಷ್ಟ ಮಾದರಿಯ ಸಂಸ್ಕೃತಿ'ಯೊಂದು ಶಾಲೆಯಲ್ಲಿ ಆಳವಾಗಿ ಬೇರೂರಿರುತ್ತದೆ. ಆದ್ದರಿಂದ ಶಾಲೆಯ ವಾತಾವರಣದಲ್ಲಿ ವ್ಯವಸ್ಥಿತ ಬದಲಾವಣೆಯ ಮೂಲಕ ಮಾತ್ರ ಇದರಲ್ಲಿ ದೀರ್ಘಕಾಲದ ಅವಧಿಯಲ್ಲಿ ಉಳಿಯಬಲ್ಲ ಪರಿವರ್ತನೆಯನ್ನು ತರಲು ಸಾಧ್ಯ'[i]. 'ಶಾಲಾ ಸಂಸ್ಕೃತಿಯನ್ನು ಮೌಲ್ಯಗಳ ಕುರಿತ

ಸಮಾನ ತಿಳುವಳಿಕೆ, ನಿಯಮಗಳು, ನಂಬಿಕೆಯ ಮಾದರಿಗಳು, ಬೋಧನೆ ಮತ್ತು ಕಲಿಕೆಯ ವಿಧಾನಗಳು, ನಡವಳಿಕೆಗಳು ಮತ್ತು ಶಾಲೆಯಲ್ಲಿನ ವ್ಯಕ್ತಿಗಳ ನಡುವಿನ ಅಥವಾ ಅವರೊಂದಿಗಿನ ಸಂಬಂಧಗಳು ಎಂದು ವ್ಯಾಖ್ಯಾನಿಸಲಾಗಿದೆ'.[i] ಸಾಮಾನ್ಯವಾಗಿ ಶಾಲೆಗಳು ಮೇಲ್ನೋಟಕ್ಕೆ ಕಾಣುವ ಈ ಚಿತ್ರಣವನ್ನು ಮೀರಿ ಸೂಕ್ಷ್ಮ ಸ್ತರದಲ್ಲಿ ಕಾರ್ಯನಿರ್ವಹಿಸುತ್ತವೆ ಮತ್ತು ಇದರೊಂದಿಗೆ ಶಾಲೆಯ ಕಟ್ಟುಕಟ್ಟಳೆಗಳು, ಅಲಿಖಿತ ನಿಯಮಗಳು, ಸಂಪ್ರದಾಯಗಳು ಮತ್ತು ಸೂಚ್ಯವಾದ ನಿರೀಕ್ಷೆಗಳನ್ನೂ ಒಳಗೊಂಡಿರುತ್ತವೆ. ಅಜೀಂ ಪ್ರೇಮ್‌ಜಿ ಶಾಲೆಗಳನ್ನು ಸ್ಥಾಪಿಸಲು ಅವಶ್ಯಕವಾಗಿದ್ದ ಅನೇಕ ವಿಷಯಗಳಲ್ಲಿ, ಮಕ್ಕಳು ಸುರಕ್ಷಿತ ಮನೋಭಾವ ಹೊಂದುವ ಮತ್ತು ಸಂತೋಷವನ್ನು ಅನುಭವಿಸುವ ಸ್ಥಳವನ್ನು ನಿರ್ಮಾಣ ಮಾಡುವುದು ಆದ್ಯತೆಯಾಗಿತ್ತು. ಆಹ್ಲಾದಕರ ವಾತಾವರಣವು – ಸಮೃದ್ಧ ಬೋಧನೆ–ಕಲಿಕಾ ಅನುಭವಗಳು, ಶಿಕ್ಷಕರ ಉತ್ತರದಾಯಿತ್ವ, ಉತ್ಸಾಹಭರಿತ ಪೋಷಕ–ಶಿಕ್ಷಕ ಸಭೆಗಳು – ಇವೆಲ್ಲದರ ನಡುವೆ ಆರೋಗ್ಯಕರ ಸಂಬಂಧಗಳಿಗೆ ಅಡಿಪಾಯವಾಗಿ ಕಾರ್ಯ–ನಿರ್ವಹಿಸುತ್ತದೆ ಎಂದು ಭಾವಿಸಲಾಗಿತ್ತು. ಏಕೆಂದರೆ ನಿರೀಕ್ಷೆಗಳು ಬಹುತೇಕ ಎಲ್ಲದರ ಮೇಲೆ ಪರಿಣಾಮ ಬೀರುತ್ತವೆ. ಉದಾಹರಣೆಗೆ, ಸಂತೋಷವಾಗಿರುವುದು ಎಂದರೆ ಶಾಲೆಗೆ ಬರಲು ಉತ್ಸಾಹದಿಂದ ಎದುರು ನೋಡುವುದು. ಇದು ಒಟ್ಟಾರೆ ಉದ್ದೇಶ ಮತ್ತು ಯೋಜನೆಯನ್ನು ಪೂರೈಸಿತು ಮತ್ತು ಎಲ್ಲ ಫಲಾನುಭವಿಗಳಲ್ಲಿ ಎಂದರೆ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರ ನಡುವೆ ಶಾಲೆ ನಮ್ಮದು ಮತ್ತು ನಮಗೆ ಸೇರಿದ್ದು ಎಂಬ ಒಡೆತನದ ಪ್ರಜ್ಞೆಯನ್ನು ಬೆಳೆಸಿತು.

ಶಾಲೆಯ ಸಂಸ್ಕೃತಿಯು ಯಾವುದೇ ಒಬ್ಬ ವ್ಯಕ್ತಿ ಅಥವಾ ಲಿಖಿತ ನಿಯಮಗಳಿಗಿಂತ, ಅಗತ್ಯತೆಗಳು ಮತ್ತು ಸಂದರ್ಭಗಳ ಮೇಲೆ ಹೆಚ್ಚು ಅವಲಂಬಿತವಾಗಿದ್ದು, ಸಚೇತನವಾಗಿರುವ, ವಿಕಸನ–ಗೊಳ್ಳುವ ಪ್ರಕ್ರಿಯೆಯಾಗಿ ಕಂಡುಬರುತ್ತದೆ. ಈ ಹಾದಿಯಲ್ಲಿ ಪ್ರತಿಯೊಂದು ಪ್ರಕ್ರಿಯೆ ಮತ್ತು ಘಟನೆಯು ನಿಸ್ಸಂದೇಹವಾಗಿ ನಂಬಿಕೆಗಳು ಮತ್ತು ಮೌಲ್ಯಗಳಿಗೆ ತಳಹದಿಯಾಗಿ ಕಾರ್ಯನಿರ್ವಹಿಸುತ್ತದೆ ಎಂದು ನಂಬಲಾಗಿದೆ, ಇದನ್ನು ನಂತರದಲ್ಲಿ ಶಾಲಾ ಪರಿಸರಕ್ಕೆ ಅಗತ್ಯವಿರುವ ಗ್ರಹಿಕೆಯನ್ನು ರೂಪಿಸಲು ಬಳಸಲಾಗುತ್ತದೆ. ಇವು ಕ್ರಿಯೆಗಳು ಮತ್ತು ನಡವಳಿಕೆಗೆ ಮಾರ್ಗದರ್ಶನ ನೀಡುತ್ತವೆ.

ಕೆಂಟ್ ಪೀಟರ್ಸನ್ ಮತ್ತು ಟೆರೆನ್ಸ್ ಡೀಲ್ ಅವರು ಪ್ರಸ್ತಾಪಿಸಿದಂತೆ, ಮೇಲ್ನೋಟಕ್ಕೆ ಗೋಚರವಾಗುವ 'ಶಾಲೆಯ ದೈನಂದಿನ ಜೀವನದ ಪದರದ ಆಳದಲ್ಲಿ ಜನರ ದೈನಂದಿನ ಕೆಲಸದ ಮೇಲೆ ಪ್ರಭಾವ ಬೀರುವ ಭಾವನೆಗಳು, ಪದ್ಧತಿಗಳು, ರೂಢಿಗಳು ಮತ್ತು ಮೌಲ್ಯಗಳ ಸಂಸ್ಕೃತಿ ಅಡಗಿರುತ್ತದೆ. ಈ ಹಗುರವಾಗಿ ತೆಗೆದುಕೊಳ್ಳುವ (taken-for-granted) ನಿರೀಕ್ಷೆಗಳ ಪಟ್ಟಿಯು ಜನರು ಹೇಗೆ ಯೋಚಿಸುತ್ತಾರೆ, ಭಾವಿಸುತ್ತಾರೆ ಮತ್ತು ವರ್ತಿಸುತ್ತಾರೆ ಎಂಬುದರ ಮೇಲೆ ಪರಿಣಾಮ ಬೀರುತ್ತವೆ'[iv]. ಶಾಲೆಗಳು ಆಗಷ್ಟೇ ಆರಂಭವಾಗಿದ್ದುದರಿಂದ ಈ ಯಾವುದೇ ಅಂಶಗಳನ್ನು ಅಲ್ಲಿ ವಿಧಿಸಲಿಲ್ಲ. ಸಹಕಾರ ಮನೋಭಾವ ಹಾಗೂ ಒಳಗೊಳ್ಳುವಿಕೆಯ ವಾತಾವರಣವನ್ನು ಉತ್ತೇಜಿಸಲು ಮತ್ತು ತಮ್ಮ ಶಾಲೆಯ ಕುರಿತಂತೆ ಅವರಿಗೆ ಉತ್ತಮ ಭಾವನೆಯನ್ನು ಮೂಡಿಸಲು ಎಲ್ಲರೂ ಒಟ್ಟಾಗಿ ಕೆಲಸ ಮಾಡಲೇಬೇಕಿತ್ತು.

## ಶಾಲಾ ಸಂಸ್ಕೃತಿಯನ್ನು ರೂಪಿಸುವುದು

'ಶಾಲೆಗಳನ್ನು ಬೋಧನೆ ಮತ್ತು ಕಲಿಕೆ ನಡೆಯುವ ಜ್ಞಾನವನ್ನು ವರ್ಗಾಯಿಸಲಾಗುವ ಮಕ್ಕಳು ಇತರ ವ್ಯಕ್ತಿಗಳ ಬಗ್ಗೆ, ಇತಿಹಾಸ ಮತ್ತು ವೈವಿಧ್ಯಮಯ ಸಾಮಾಜಿಕ ಸಮಸ್ಯೆಗಳನ್ನು ಕಲಿಯುವ ಸ್ಥಳಗಳನ್ನಾಗಿ ನೋಡಲಾಗುತ್ತದೆ'.[v] ಶಿಕ್ಷಣವು ಸಾಮಾಜಿಕ ಸಂವೇದನೆ ಮತ್ತು ಸ್ವ–ಅರಿವನ್ನು ಪ್ರೋತ್ಸಾಹಿಸಬೇಕು. ಆದ್ದರಿಂದ ಶಾಲೆಗಳು ಕೇವಲ ಭೌತಿಕ ಸ್ಥಳಗಳಲ್ಲ, ಅದಕ್ಕಿಂತಲೂ ಮಿಗಿಲಾದವು. ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಪರಸ್ಪರ ಗೌರವ ಮುಂತಾದ ಆದರ್ಶಗಳಿಂದ ಕೂಡಿರುವ ಪರಿಸರದಲ್ಲಿ ಕಲಿಯುವ ಮತ್ತು ಕಲಿಕೆಗೆ ಸಹಯೋಗವನ್ನು ಒದಗಿಸುವ ಶಾಲಾ ಸಮುದಾಯವನ್ನು ರಚಿಸುವುದು ಅಜೀಂ ಪ್ರೇಮ್‌ಜಿ ಶಾಲೆಗಳ ಪ್ರಮುಖ ಉದ್ದೇಶವಾಗಿದೆ. ಹೀಗಾಗಿ ಭಾಗೀದಾರರು ಸಂವಹನ ಮತ್ತು ಸಹಯೋಗದ ಮೂಲಕ ಶಾಲೆಗಳ ನಿರ್ವಹಣೆಯಲ್ಲಿ ಭಾಗವಹಿಸಬೇಕು ಮತ್ತು ಆ ಮೂಲಕ, ಸಾಮುದಾಯಿಕ ಮತ್ತು ಮಾಲೀಕತ್ವದ ಪ್ರಜ್ಞೆಯನ್ನು ಉತ್ತೇಜಿಸಬೇಕು.

## ಸಂವಾದದ ಪಾತ್ರ

ಸಂವಾದವು ಆತ್ಮಾವಲೋಕನ ಮತ್ತು ವಿನಿಮಯದ ಪ್ರಕ್ರಿಯೆಯಾಗಿದ್ದು, ಅದು ವಿಭಿನ್ನ ದೃಷ್ಟಿಕೋನಗಳನ್ನು ತರಲು ಅನುವು ಮಾಡಿಕೊಡುತ್ತದೆ. ಭಾಗೀದಾರರ ನಡುವಿನ ಸಂವಾದಗಳು, ಸಂಬಂಧಗಳನ್ನು ಸ್ಥಾಪಿಸುವುದು, ಎಲ್ಲ ಹಂತದಲ್ಲೂ ಘರ್ಷಣೆಗೆ ಪರಿಹಾರ – ಗುಂಪುಗಳ ಒಳಗೆ ಅಥವಾ ವ್ಯಕ್ತಿಗಳ ನಡುವೆ – ಮತ್ತು ಸಮಸ್ಯೆಗಳನ್ನು ಬಗೆಹರಿಸಲು ವೇದಿಕೆಯನ್ನು ಹೊಂದುವುದು, ಸಂಸ್ಕೃತಿಯನ್ನು ನೆಲೆಗೊಳಿಸಲು ಮತ್ತು ಶಿಕ್ಷಣ ವಿಧಾನವೊಂದನ್ನು ರೂಪಿಸಲು ನಿರ್ಣಾಯಕವೆಂದು ಪರಿಗಣಿಸಲಾಗಿದೆ. ಅಂದರೆ ವ್ಯಕ್ತಿಗಳನ್ನು ಸುಶಿಕ್ಷಿತರನ್ನಾಗಿಸುವುದು ಮತ್ತು ಸಂವಾದಗಳನ್ನು ಗೌರವಿಸಿ ಅವುಗಳಲ್ಲಿ ತೊಡಗಿಸಿಕೊಳ್ಳಲು ಅವರನ್ನು ಅಣಿಗೊಳಿಸುವುದು. ಬೆಳಗಿನ ಪ್ರಾರ್ಥನಾ ಸಭೆಗಳು, ಸಭೆಗಳು, ತರಗತಿಗಳು ಮತ್ತು ಆಟದ ಮೈದಾನಗಳಂತಹ ಸ್ಥಳಗಳನ್ನು ಸಂವಾದಕ್ಕಾಗಿ ಮತ್ತು ಅಭಿಪ್ರಾಯವನ್ನು ಹಂಚಿಕೊಳ್ಳಲು ಬಳಸಲಾಯಿತು. ಉದಾಹರಣೆಗೆ, ಪ್ರಾರ್ಥನಾ ಸಭೆಗಳು ಅಸೆಂಬ್ಲಿ ಕೇವಲ ಪ್ರಾರ್ಥನೆಗಳಿಗೆ, ಸುದ್ದಿಗಳನ್ನು ಹಂಚಿಕೊಳ್ಳಲು ಮತ್ತು ಇತರೆ ಶಾಲಾ– ಸಂಬಂಧಿತ ಆಚರಣೆಗಳಿಗಾಗಿ ಸೀಮಿತಗೊಳಿಸದೆ ಸಂವಾದಗಳನ್ನು ಬೆಳೆಸುವ ವೇದಿಕೆಯಾಗಿ ನೋಡಲಾಯಿತು. ವಯಸ್ಕರು ಮತ್ತು ಮಕ್ಕಳು ಇಬ್ಬರಿಗೂ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಮತ್ತು ಅವರ ಆಸಕ್ತಿಯ ವಿಷಯಗಳ ಬಗ್ಗೆ

ಮಾತನಾಡಲು ಪ್ರೋತ್ಸಾಹಿಸಲಾಯಿತು. ಮಕ್ಕಳ ಪ್ರದರ್ಶನಗಳು ತರಗತಿ- ಯೊಳಗಿನ ಕಲಿಕೆಯ ಫಲಿತಾಂಶವಾಗಿವೆ, ಅವು ನಿರ್ದಿಷ್ಟವಾಗಿ ಅಸೆಂಬ್ಲಿಗಾಗಿ ಯೋಜಿಸಲಾದದ್ದಲ್ಲ. ಅವು ಮಕ್ಕಳ ಅಭಿಪ್ರಾಯಗಳಿಗೂ ಅವಕಾಶ ನೀಡಲಾಗಿದೆ ಮತ್ತು ಅವರೂ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಬಹುದು ಎಂದು ತಿಳಿಸಲು ಬಳಸುವ ಮಾರ್ಗವಾದವು. ಆಟದ ಮೈದಾನದಲ್ಲಿ, ಗೆಲ್ಲುವುದು ಮತ್ತು ಸೋಲುವುದನ್ನು ಆಟದ ಭಾಗವೆಂದು ಪರಿಗಣಿಸಲಾಯಿತು ಮತ್ತು ಚರ್ಚೆಗಳು ಕೇವಲ ಆಟದ ಸುತ್ತ ಇರದೆ, ಮಕ್ಕಳು ಏನು ಭಾವಿಸುತ್ತಾರೆ ಮತ್ತು ಅವರು ಹೇಗೆ ವರ್ತಿಸುತ್ತಾರೆ ಎಂಬುದರ ಸುತ್ತವಿರುತ್ತಿತ್ತು (ವಿಶೇಷವಾಗಿ ಆಟವಾಡುವಾಗ ಯಾವುದೇ ಆಕ್ರಮಣಶೀಲತೆಯ ಸಂದರ್ಭ ಕಂಡುಬಂದಿದ್ದಲ್ಲಿ).

ಕಾಲಕ್ರಮೇಣ, ಮಕ್ಕಳು ಚರ್ಚೆಯ ಸಮಯದಲ್ಲಿ ಮಾತನಾಡುವ ವಿಶ್ವಾಸವನ್ನು ಬೆಳೆಸಿಕೊಂಡರು, ಶಿಕ್ಷಕರು ಅಥವಾ ಅಷ್ಟೇನೂ ಪರಿಚಿತರಲ್ಲದ ಜನರೊಂದಿಗೆ ಸಂಭಾಷಣೆಯಲ್ಲಿ ತೊಡಗಿ-ಕೊಂಡರು ಮತ್ತು ಅವರ ಸಮಸ್ಯೆಗಳನ್ನು ಹಂಚಿಕೊಳ್ಳಲು ಆರಂಭಿಸಿದರು. ಮಕ್ಕಳು ತಮ್ಮ ಆಯ್ಕೆಯ ಬಗ್ಗೆ ತಿಳುವಳಿಕೆ ಹೊಂದಿದ್ದಾರೆ ಎಂದು ಖಚಿತಪಡಿಸಿಕೊಳ್ಳಲು ಇದು ಒಂದು ಮಾರ್ಗವಾಗಿತ್ತು. ಸಾಮಾಜಿಕ ಸಮಸ್ಯೆಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವನ್ನು ಮೂಡಿಸುವುದು ಮುಖ್ಯ ಎಂದು ನಮ್ಮ ಶಾಲೆಯೊಂದರಲ್ಲಿ ಶಿಕ್ಷಕರು ನಂಬಿದ್ದರು. ಆದ್ದರಿಂದ, ಅವರು ಆ ಪ್ರದೇಶದಲ್ಲಿ ಪ್ರಚಲಿತದಲ್ಲಿರುವ ಬಾಲ್ಯವಿವಾಹದಂತಹ ಸಮಸ್ಯೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಅಸೆಂಬ್ಲಿಯಲ್ಲಿ ಮತ್ತು ತರಗತಿಯಲ್ಲಿ ಚರ್ಚೆಯನ್ನು ಕೈಗೆತ್ತಿಕೊಂಡರು. ಇದರ ಫಲಶ್ರುತಿಯಾಗಿ ಒಬ್ಬ ವಿದ್ಯಾರ್ಥಿಯು ಮದುವೆಯ ಸಾಮಾಜಿಕ ಒತ್ತಡವನ್ನು ವಿರೋಧಿಸಲು ಸಾಧ್ಯವಾಯಿತು. ಆ ಮೂಲಕ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಎಲ್ಲರ ಹಿತರಕ್ಷಣೆಗಾಗಿ ಸಂವಾದವು ಪರಿಣಾಮಕಾರಿ ವಿಧಾನ ಎಂಬುದನ್ನು ನಿರೂಪಿಸಲಾಯಿತು.

## ಭಾಗೀದಾರರೊಂದಿಗೆ ಕೆಲಸ ಮಾಡುವುದು

ಪೋಷಕರೊಂದಿಗೆ ತೊಡಗಿಸಿಕೊಳ್ಳುವುದು

ಶಾಲೆಗಳು ಯಾವ ರೀತಿಯ ಪೋಷಕರನ್ನು ಹೊಂದಿವೆ-ಎಂಬುದನ್ನು ಗಮನಿಸಿ, ಪೋಷಕ- ಶಿಕ್ಷಕರ ಸಭೆಗಳನ್ನು ವಿಚಾರಪೂರ್ಣವಾಗಿ ಆಯೋಜಿಸಬೇಕಿತ್ತು. ಶಾಲೆಯ ದೃಷ್ಟಿಕೋನಗಳನ್ನು ತಿಳಿಸುವ ಸಂದರ್ಭದಲ್ಲಿ ಪೋಷಕರು ಮತ್ತು ಸಮುದಾಯದ ದೃಷ್ಟಿಕೋನಗಳನ್ನು ಅರ್ಥ ಮಾಡಿಕೊಳ್ಳಲು ಶಿಕ್ಷಕರನ್ನು ಪ್ರೋತ್ಸಾಹಿಸಲಾಯಿತು. ಪೋಷಕರು, ಪೋಷಕ ಶಿಕ್ಷಕ ಸಭೆಗಳಿಗೆ ಹಾಜರಾಗಲು ಎದುರು ನೋಡುವಂತೆ ಮಾಡುವುದು, (ಆದರೆ ಅದನ್ನು ದೂರು ನೀಡುವ ಅಲ್ಲದಂತೆ ವೇದಿಕೆಯನ್ನಾಗಿ) ನಮ್ಮ ಗುರಿಯಾಗಿತ್ತು. ಇದು ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲು, ಮಗುವಿನ ಸಾಧನೆಯನ್ನು ಸಂಭ್ರಮಿಸಲು, ಶಿಕ್ಷಕರು ಮತ್ತು ಪೋಷಕರು ಮಗುವಿನ ಒಳಿತಿಗೆ ಹಾಗೂ ಕಾರ್ಯಕ್ಷಮತೆ ಹೆಚ್ಚಿಸಲು ಒಟ್ಟಾಗಿ ಕೆಲಸ ಮಾಡುವುದನ್ನು ಖಚಿತಪಡಿಸಿಕೊಳ್ಳಲು ಇರುವ ಒಂದು ಅವಕಾಶವೆಂದು ಅರಿಯಲಾಯಿತು.

ಶಿಕ್ಷಕರು ಪ್ರತಿ ಮಗುವಿನ ಕಲಿಕೆಯ ದಾಖಲೆಯನ್ನು ಇಟ್ಟಿರಬೇಕು ಮತ್ತು ಅದು ಪೋಷಕರಿಗೆ ಲಭ್ಯವಾಗುವಂತೆ ಮಾಡಬೇಕಿತ್ತು. ಅಂತಿಮವಾಗಿ – ಪೋಷಕರು ತಮ್ಮ ಮಗುವಿನ ಬಗ್ಗೆ ತಿಳಿದುಕೊಳ್ಳುವ ಎಲ್ಲ ಹಕ್ಕನ್ನು ಹೊಂದಿದ್ದಾರೆ ಮತ್ತು ಎಲ್ಲ ವಿವರಗಳನ್ನು ಸೂಕ್ತ ಸಾಕ್ಷ್ಯದೊಂದಿಗೆ ಒದಗಿಸುವುದು ಶಿಕ್ಷಕರ ಕರ್ತವ್ಯವಾಗಿದೆ. ಪಾಲಕರು ತಮ್ಮ ಮಗುವಿನ ಜೊತೆ ಕಲಿಕೆಯಲ್ಲಿ ತೊಡಗಿಸಿಕೊಳ್ಳುವುದು ಮತ್ತು ಆ ಕುರಿತು ಆಸಕ್ತಿ ಹೊಂದಿರುವುದನ್ನು ನಿರೀಕ್ಷಿಸಲಾಯಿತು. ಎಂದರೆ ಇದರರ್ಥ ಪೋಷಕರು ಮಕ್ಕಳಿಗೆ ಕಲಿಸಬೇಕು ಎಂದಲ್ಲ; ತಾವು ಮಕ್ಕಳಿಗೆ ಕಲಿಸದೆಯೇ ದಿನಚರಿಯನ್ನು ತಯಾರಿಸುವುದು. ಹೀಗಾಗಿ ಶಿಕ್ಷಕರು ಮತ್ತು ಪೋಷಕರ ನಡುವೆ ಪರಸ್ಪರ ಗೌರವ ಹಾಗೂ ನಂಬಿಕೆ ಇರುವುದು ಅತ್ಯಗತ್ಯ.

ಪೋಷಕರ ಆತಂಕವನ್ನು ಸೌಹಾರ್ದಯುತವಾಗಿ ಪರಿಹರಿಸ-ಲಾಗುತ್ತಿತ್ತು. ಶಿಕ್ಷಕರು ಕೆಲವೊಂದು ಸಮಸ್ಯೆಗಳನ್ನು ನಿರ್ವಹಿಸಲು ಅದು ತಮ್ಮ ಸಾಮರ್ಥ್ಯ ಮೀರಿದ್ದು ಎಂದು ಭಾವಿಸಿದರೆ, ಅದನ್ನು ಅವರು ತಮ್ಮ ಸಹೋದ್ಯೋಗಿಗಳು ಮತ್ತು ಆಡಳಿತ ಮಂಡಳಿಯೊಂದಿಗೆ ಹಂಚಿಕೊಳ್ಳಬಹುದಾಗಿತ್ತು. ಉರುಹೊಡೆಯುವ ಕಲಿಕೆಯನ್ನು ಉತ್ತೇಜಿಸದಿರುವುದು, ಶಾಲೆಯ ಮುನ್ನೋಟ, ಮತ್ತು ಶಿಕ್ಷಣದ ಇತರ ವಿಶಾಲ, ಸಾಮಾನ್ಯ ಗುರಿಗಳು ಮುಂತಾದ ವಿಷಯಗಳನ್ನು ಚರ್ಚಿಸುವುದರ ಮೂಲಕ ದೃಷ್ಟಿಕೋನಗಳನ್ನು ರೂಪಿಸುವುದು ಸಭೆಯ ಕಾರ್ಯಸೂಚಿಯ ಭಾಗವಾದವು. ಶಾಲೆಯೊಂದರ ಮೊದಲ ಪೋಷಕ-ಶಿಕ್ಷಕರ ಸಭೆಯಲ್ಲಿ ಪೋಷಕರೊಬ್ಬರು, 'ನೀವು ಇಲ್ಲಿಗೆ ಏನು ಮಾಡಲು ಬಂದಿದ್ದೀರೋ ಅದನ್ನು ಮಾಡಿ, ನಿಮಗೆ ನಮ್ಮೆಲ್ಲರ ಬೆಂಬಲವಿದೆ ಮೇಡಂ' ಎಂದಿದ್ದು ಈಗ ನೆನಪಾಗುತ್ತದೆ.

## ಮಕ್ಕಳೊಂದಿಗೆ ಕೆಲಸ ಮಾಡುವುದು

ಆ ಶಾಲೆಗೆ ದಾಖಲಾದ ಮಕ್ಕಳು ಸ್ಥಳೀಯ ಸಮುದಾಯದಿಂದ ಬಂದವರಾಗಿದ್ದರು; ಸ್ಥಳೀಯ ಶಾಲೆಗಳು ಕಾರ್ಯನಿರ್ವಹಿಸುವ ರೂಢಿಗತ ವಿಧಾನಗಳಿಗೆ ಅವರು ಒಗ್ಗಿಕೊಂಡಿದ್ದರು; ಅಲ್ಲಿ ವ್ಯವಸ್ಥೆಗಳು, ಪ್ರೋತ್ಸಾಹಕಗಳು, ಮತ್ತು ಘಟಕ ಪರೀಕ್ಷೆಗಳು ಜಾರಿಯಲ್ಲಿದ್ದವು. ಉದಾಹರಣೆಗೆ, ಮಕ್ಕಳು ನಿರಂತರ ಶಿಕ್ಷಕರ ಮೇಲ್ವಿಚಾರಣೆ ಮತ್ತು ತಪ್ಪುಗಳಿಗಾಗಿ ಶಿಕ್ಷೆ ಪಡೆಯುವುದಕ್ಕೆ ಒಗ್ಗಿಕೊಂಡಿದ್ದರು. ತರಗತಿಯಲ್ಲಿ 'ಮುಕ್ತ ಆಟ' ಅಥವಾ ಸ್ವಾಯತ್ತ ಕಲಿಕೆಯಲ್ಲಿ (ಸ್ವತಂತ್ರವಾಗಿ ಓದುವುದು ಅಥವಾ ಆಕರ್ಷಕ ಚಿತ್ರ ಪುಸ್ತಕಗಳನ್ನು ಆಯ್ಕೆ ಮಾಡುವುದು) ತೊಡಗಿಸಿಕೊಳ್ಳಲು ಅವಕಾಶ ನೀಡಿದಾಗ ಹೇಗೆ ವರ್ತಿಸಬೇಕು ಎಂದು ಅವರಿಗೆ ಅರಿವಿರಲಿಲ್ಲ. ಅವರ ಹೊಸ ಶಾಲೆಯು 'ಶಿಕ್ಷೆಯಿಲ್ಲದ'

ಸ್ಥಳವಾಗಿರುವುದರಿಂದ, ಮಕ್ಕಳು ಆಗಾಗ್ಗೆ ರೊಚ್ಚಿಗೇಳುತ್ತಿದ್ದರು ಮತ್ತು ಅವರನ್ನು ಅವರಷ್ಟಕ್ಕೇ ಬಿಟ್ಟಾಗ ಆಕ್ರಮಣಕಾರಿ-ಯಾಗುತ್ತಿದ್ದರು. ಇಲ್ಲಿ ನಿಜವಾಗಿಯೂ ಸಹಾಯ ಮಾಡಿದ್ದು ಮಕ್ಕಳೊಂದಿಗಿನ ನಿರಂತರ ಸಂವಾದ.

ಶಿಕ್ಷಕರು ಎರಡೂ ಕಡೆಯ ವಾದಗಳನ್ನು ಆಲಿಸುತ್ತಾ ಮಕ್ಕಳೊಂದಿಗೆ ಸಂವಾದದಲ್ಲಿ ತೊಡಗಿದರು. ಶಿಕ್ಷಕರು ಸಕ್ರಿಯ ಕೇಳುಗರು ಮತ್ತು ವೀಕ್ಷಕರಾಗಿರಬೇಕಾಗಿತ್ತು; ಮಧ್ಯಪ್ರವೇಶಿಸದ, ನಿಷ್ಪಕ್ಷಪಾತ ಮತ್ತು ನ್ಯಾಯಯುತ ತೀರ್ಪು ನೀಡುವವರಾಗಿರಬೇಕಿತ್ತು. ನಿಸ್ಸಂದೇಹವಾಗಿ, ಇದು ನಿಜವಾಗಿಯೂ ಶಿಕ್ಷಕರಿಗೆ ಸವಾಲಾಗಿತ್ತು ಮತ್ತು ಅವರ ಸಾಮಾನ್ಯ ಚಿಂತನೆಯ ವಿರುದ್ಧವಾಗಿತ್ತು. ಆದ್ದರಿಂದ, ಮಕ್ಕಳೊಂದಿಗೆ ಕೆಲಸ ಮಾಡುವ ವಾಡಿಕೆಯ ವಿಧಾನಗಳನ್ನು ಪರ್ಯಾಲೋಚಿಸುವ ಅವಶ್ಯಕತೆಯಿತ್ತು. ನಿಧಾನವಾಗಿ, ಶಿಕ್ಷಕರು ತಮ್ಮ ಸಮಸ್ಯೆಗಳನ್ನು ತಾವೇ ಪರಿಹರಿಸಿಕೊಳ್ಳುವತ್ತ ಮಕ್ಕಳನ್ನು ಪ್ರೋತ್ಸಾಹಿಸಲು ಪ್ರಾರಂಭಿಸಿದರು ಮತ್ತು ಪರಿಹಾರಗಳನ್ನು ಸೂಚಿಸುತ್ತಿರಲಿಲ್ಲ. ಅವರು ಸ್ನೇಹಿತರೊಂದಿಗೆ ತಮ್ಮನ್ನು ತಾವು ತೊಡಗಿಸಿಕೊಳ್ಳಬಹುದಾದ ಪರ್ಯಾಯ ಮಾರ್ಗಗಳನ್ನು ಅವರಿಗೆ ತೋರಿಸಿ ಆಟದ ಮೈದಾನದಲ್ಲಿ ಸೋತಾಗ, ಶಾಲಾ ಕೆಲಸದಿಂದ ಅಥವಾ ಸಹಪಾಠಿಯಿಂದಾಗಿ ಬೇಸರಗೊಂಡಾಗ, ಅಥವಾ ಕೆಲವೊಮ್ಮೆ ಮನೆಯ ಪರಿಸ್ಥಿತಿಯಿಂದಾಗಿ ಕೋಪಗೊಂಡಾಗ ಅದನ್ನು ನಿರ್ವಹಿಸುವ ವಿಧಾನಗಳನ್ನು ಅಥವಾ ಹೇಗೆ ಅದನ್ನು ವ್ಯಕ್ತಪಡಿಸಬೇಕೆಂದು ಚರ್ಚಿಸಲಾಗುತ್ತಿತ್ತು.

ಬದಲಾವಣೆಗಳು ನಿಜವಾಗಿಯೂ ಆಶ್ಚರ್ಯಕರವಾಗಿದ್ದವು; ಒಂದು ತಿಂಗಳೊಳಗೆ, ಮಕ್ಕಳು ಬದಲಾದ ವಾತಾವರಣಕ್ಕೆ ಹೊಂದಿಕೊಳ್ಳಲು ಪ್ರಾರಂಭಿಸಿದರು. ತಮ್ಮದೇ ಆದ ಬೋರ್ಡ್ ಆಟಗಳನ್ನು ತಯಾರಿಸಲು ಪ್ರಾರಂಭಿಸಿದರು, ಸುಲಭವಾಗಿ ಲಭ್ಯವಿರುವ ವಸ್ತುಗಳೊಂದಿಗೆ ಆಟವಾಡಲು ಪ್ರಾರಂಭಿಸಿದರು ಮತ್ತು ಶಿಕ್ಷಕರಿಂದ ಯಾವುದೇ ಔಪಚಾರಿಕ ಸೂಚನೆಗಳು ಇಲ್ಲದಿರುವಾಗ ಅಥವಾ ಸಂಘಟಿತ ಚಟುವಟಿಕೆಗಳು ಇಲ್ಲದಿರುವಾಗ ಬಿಡುವಿನ ವೇಳೆ/ ಮೇಲ್ವಿಚಾರಣೆಯಿಲ್ಲದ ಸಮಯದಲ್ಲಿ, ಒಬ್ಬರೇ ಇರುವ ಸಂದರ್ಭದಲ್ಲಿ, ಉಪಯುಕ್ತ ಮತ್ತು ಉತ್ಪಾದಕ ಮಾರ್ಗಗಳನ್ನು ಕ್ರಮೇಣ ಹುಡುಕಿಕೊಂಡರು.

## ಶಿಕ್ಷಕರೊಂದಿಗಿನ ಪರ್ಯಾಲೋಚನೆ

ಶಿಕ್ಷಕರು ಸಂಸ್ಥೆಗೆ ಹೊಸಬರಾದರೂ ವೃತ್ತಿಗೆ ಹೊಸಬರೇನೂ ಆಗಿರಲಿಲ್ಲ. ಅವರು ತಮ್ಮದೇ ಆದ ನಂಬಿಕೆಗಳು ಮತ್ತು ಮೌಲ್ಯಗಳೊಂದಿಗೆ ಬಂದಿದ್ದರು. ಅದು ಶಿಕ್ಷಣ, ಮಕ್ಕಳ ಕುರಿತದ್ದಾಗಿರಬಹುದು ಅಥವಾ ಶಿಕ್ಷಕರಾಗಿ ತಮ್ಮನ್ನು ಕುರಿತೇ ಆಗಿರಬಹುದು, ಶಿಸ್ತಿನ ಕಲ್ಪನೆ ಅಥವಾ ಪರೀಕ್ಷೆಗಳಂತಹ ಅಂಶಗಳೂ ಇರಬಹುದು.
ಯಾವುದೇ ವಿದ್ಯಾರ್ಥಿಯ ಯೋಗಕ್ಷೇಮಕ್ಕೆ ಸಂಬಂಧಿಸಿದ ಪ್ರಯತ್ನದಲ್ಲಿ ಶಿಕ್ಷಕರ ಯೋಗಕ್ಷೇಮ ಮತ್ತು ಮೌಲ್ಯಗಳು ನಿರ್ಣಾಯಕವಾಗಿವೆ. ಶಿಕ್ಷಕರು ತಮಗೂ ಬೆಲೆಯಿದೆ ಎಂದು ಭಾವಿಸುವ, ತಮ್ಮದೇ ಆದ ಅಭಿಪ್ರಾಯಗಳನ್ನು, ಧ್ವನಿಯನ್ನು ಹೊಂದುವ ಮತ್ತು ಅವರ ಕೆಲಸದ ಮೇಲೆ ಪ್ರಭಾವ ಬೀರುವ ಅಂಶಗಳ ಕುರಿತು ನಿರ್ಧಾರ ತೆಗೆದುಕೊಳ್ಳುವಲ್ಲಿ ಅವರನ್ನು ತೊಡಗಿಸಿಕೊಳ್ಳುವ ಅಗತ್ಯವಿದೆ. ಶಿಕ್ಷಕರನ್ನು ಗೌರವಿಸಲಾಯಿತು ಮತ್ತು ಅವರ ಅನುಭವ, ಪರಿಣತಿಯನ್ನು ಗುರುತಿಸಲಾಯಿತು. ಶಿಕ್ಷಕರಾಗಿ ಅವರೂ. ತಮ್ಮ ವಿದ್ಯಾರ್ಥಿಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದುವ ಅಗತ್ಯದ ಮಹತ್ತ್ವವನ್ನು ಅರ್ಥ ಮಾಡಿಕೊಳ್ಳಬೇಕಾಗಿತ್ತು ಮತ್ತು ಅವರನ್ನು ತಿಳಿದುಕೊಳ್ಳಲು ಸಮಯವನ್ನು ತೆಗೆದುಕೊಳ್ಳುವ ಅಗತ್ಯವಿತ್ತು. ಪರಸ್ಪರರಲ್ಲಿ ವಿಶ್ವಾಸವುಳ್ಳ ಸಂಸ್ಕೃತಿಯನ್ನು ರೂಪಿಸುವಲ್ಲಿ ಅವರು ಎಂಥ ನಿರ್ಣಾಯಕ ಪಾತ್ರವನ್ನು ವಹಿಸಲಿದ್ದಾರೆ ಎಂಬುದನ್ನು ಅವರು ಗ್ರಹಿಸಬೇಕಾಗಿತ್ತು.

ಶಾಲೆಯ ಬಗೆಗೆ ಒಡೆತನದ ಪ್ರಜ್ಞೆಯನ್ನು ಬೆಳೆಸಲು ಶಿಕ್ಷಕರೊಂದಿಗೆ ಗುಣಮಟ್ಟದ ಸಮಯವನ್ನು ಕಳೆಯಲು ನಿರ್ಧರಿಸಲಾಯಿತು ಮತ್ತು ಅದಕ್ಕನುಗುಣವಾಗಿ ಪ್ರಕ್ರಿಯೆ ಮತ್ತು ವ್ಯವಸ್ಥೆಗಳನ್ನು ಸರಿ ಹೊಂದಿಸಲಾಯಿತು. ಪರಸ್ಪರರನ್ನು ಅರ್ಥ ಮಾಡಿಕೊಳ್ಳಲು ಮತ್ತು ಭಿನ್ನಾಭಿಪ್ರಾಯಗಳನ್ನು ನಿವಾರಿಸಲು ಸಂಭಾಷಣೆ ಮತ್ತು ಸಂವಾದಗಳನ್ನು 'ಮುಂದಿನ ಹಾದಿಯಾಗಿ' ('the way forward') ಎಂದು ಪರಿಗಣಿಸಲಾಯಿತು. ಅಂತಹ ವೇದಿಕೆಗಳಲ್ಲಿ ಒಂದಾಗಿರುವ ಸಿಬ್ಬಂದಿ ಸಭೆಗಳು ಶಾಲೆಗಳನ್ನು ಸ್ಥಾಪಿಸುವ ಆರಂಭಿಕ ದಿನಗಳಲ್ಲಿ ಪ್ರತಿದಿನವೂ ನಡೆಯುತ್ತಿದ್ದವು. ಅದು ಎಲ್ಲರೂ ಒಟ್ಟಾಗಿ ಸೇರಿ, ದೈನಂದಿನ ಕೆಲಸದ ಬಗೆಗಿನ ಟಿಪ್ಪಣಿಗಳನ್ನು ವಿನಿಮಯ ಮಾಡಿಕೊಳ್ಳಲು, ಕಾಳಜಿಗಳನ್ನು ಹಂಚಿಕೊಳ್ಳಲು, ಸಾಧನೆಗಳನ್ನು ಸಂಭ್ರಮಿಸಲು ಮತ್ತು ಆಡಳಿತ, ಮಧ್ಯಾಹ್ನದ ಬಿಸಿಯೂಟ ಅಥವಾ ತರಗತಿಗೆ ಸಂಬಂಧಿಸಿದ ಸವಾಲುಗಳನ್ನು ಚರ್ಚಿಸುವ ಸಮಯವಾಗಿತ್ತು.

ಸಭೆಗಳು ದೃಷ್ಟಿಕೋನಗಳನ್ನು ರೂಪಿಸಲು, ತರಗತಿಯ ಬೋಧನೆ, ಶಾಲಾ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಚಾಲ್ತಿಯಲ್ಲಿರುವ ಆಚರಣೆಗಳನ್ನು ಚರ್ಚಿಸಲು ಮತ್ತು ಸಂಘರ್ಷಗಳನ್ನು ಪರಿಹರಿಸಲು ಒಂದು ವೇದಿಕೆಯಾಗಿದ್ದವು. ಬೋಧನೆಯಲ್ಲಿ ಪಠ್ಯಪುಸ್ತಕದಾಚೆಗಿನ ಕಲಿಕೆಯ ತಿರುಳನ್ನು ಅರ್ಥಮಾಡಿಕೊಳ್ಳಲು ಇದು ಒಂದು ಅವಕಾಶವಾಯಿತು. ಮಕ್ಕಳ ಕಲಿಕೆಯ ವೇಗವು ಒಂದೇ ರೀತಿ ಇರದಿರುವುದಕ್ಕೆ ಕಾರಣಗಳು, ಏಕರೂಪತೆ ಮುಖ್ಯವೇ, ತರಗತಿಯ ನಿರ್ವಹಣೆ ಎಂದರೆ ತಮ್ಮ ಭಾವನೆಗಳು ಮತ್ತು ನಡವಳಿಕೆಯನ್ನು ನಿರ್ವಹಿಸುವುದೇ ಎಂಬಿತ್ಯಾದಿಗಳ ಕುರಿತು ಇಲ್ಲಿ ವಿಚಾರ ಮಂಥನ ನಡೆಯುತ್ತಿತ್ತು.

ಸಂಪೂರ್ಣವಾಗಿ ಇಂಥ ವಿಷಯಗಳಿಗೆಂದೇ ಸೀಮಿತವಾಗಿಸದೆ, ಶಿಕ್ಷಣದ ಗುರಿಗಳು, ಪಠ್ಯಕ್ರಮ ಅಥವಾ ಸಂಸ್ಥೆಯ ದೂರದೃಷ್ಟಿಗೆ ಅನುಗುಣವಾಗಿ ತಮ್ಮ ಅಭ್ಯಾಸಗಳನ್ನು ಸರಿ ಹೊಂದಿಸುವುದು ಇತ್ಯಾದಿಗಳನ್ನು ಔಪಚಾರಿಕವಾಗಿ

ನಡೆಸಲಾದ ಶಿಕ್ಷಕರ ವೃತ್ತಿಪರ ಅಭಿವೃದ್ಧಿ ಸಭೆಗಳಲ್ಲಿ ಚರ್ಚಿಸಲಾಗುತ್ತಿತ್ತು. ಸಿಬ್ಬಂದಿ ಸಭೆಗಳಿಗೆ ಕಾರ್ಯಸೂಚಿಗಳು ಕಟ್ಟುನಿಟ್ಟಾಗಿರಲಿಲ್ಲ – ಯಾರು ಬೇಕಾದರೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದಿತ್ತು. ಹೊಸ ಶಾಲಾ ಸಂಸ್ಕೃತಿಯನ್ನು ಜಾರಿಗೆ ತರುವಲ್ಲಿ ಶಿಕ್ಷಕರಾಗಿ ತಮ್ಮ ನಿರೀಕ್ಷೆಗಳನ್ನು ಸಿಬ್ಬಂದಿ ಸಭೆಯಲ್ಲಿ ಎಲ್ಲರೂ ಪರೀಕ್ಷಿಸಿಕೊಳ್ಳಬಹುದಿತ್ತು. ಎಲ್ಲ ವಿಷಯಗಳ ಬಗ್ಗೆ ಎಲ್ಲರೂ ಸಮಾನ ತಿಳುವಳಿಕೆಯನ್ನು ಹೊಂದಿರಬೇಕೆಂಬ ಆಶಯ ನಮ್ಮದಾಗಿತ್ತು.

## ಶಿಕ್ಷಕರ ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮಗಳು

ಫೌಂಡೇಷನ್‌ನ ದೃಷ್ಟಿಕೋನ ಮತ್ತು ಶಿಕ್ಷಕರ ಅಗತ್ಯತೆಗಳ ಆಧಾರದ ಮೇಲೆ ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಲಾಯಿತು. ಶಿಕ್ಷಕರ ವೃತ್ತಿಪರ ಅಭಿವೃದ್ಧಿಯು ನಿರಂತರ ಮತ್ತು ಸ್ಥಿರವಾದ ಪ್ರಕ್ರಿಯೆಯಾಗಿರಬೇಕು ಎಂಬ ನಂಬಿಕೆಯೊಂದಿಗೆ ಇದನ್ನು ಯೋಜಿಸಲಾಯಿತು. ಪ್ರತಿ ವರ್ಷ ವಿವಿಧ ಶಾಲೆಗಳಲ್ಲಿ ವಾರ್ಷಿಕ ಕಾರ್ಯಕ್ರಮವನ್ನು ನಡೆಸಲಾಗುತ್ತಿದ್ದು, ಅಲ್ಲಿ ಎಲ್ಲ ಶಾಲೆಗಳ ಶಿಕ್ಷಕರು ಒಟ್ಟಾಗಿ ಸೇರುತ್ತಾರೆ. ಇದು ಶಿಕ್ಷಕರಿಗೆ ವಿವಿಧ ಸ್ಥಳಗಳಿಗೆ ಪ್ರಯಾಣಿಸಲು ಮತ್ತು ಫೌಂಡೇಷನ್‌ನ ಇತರ ಶಾಲೆಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ನೋಡುವ ಅವಕಾಶ ಒದಗಿಸಿತು. ಶಿಕ್ಷಕರು ತಮ್ಮ ಅಭಿಪ್ರಾಯಗಳನ್ನು ಮತ್ತು ಆಚರಣೆಗಳನ್ನು ಹಂಚಿಕೊಳ್ಳಲು, ಪರಸ್ಪರ ಸಹಕರಿಸಲು ಮತ್ತು ಕಲಿಯಲು ಒಟ್ಟಿಗೆ ಸೇರುತ್ತಿದ್ದರು. ಇದರ ಪ್ರಮುಖ ಉದ್ದೇಶ ಫೌಂಡೇಷನ್ ಶಾಲೆಗಳ ಶಿಕ್ಷಕರ ನಡುವೆ ಒಡನಾಟವನ್ನು ಉತ್ತೇಜಿಸುವುದಾಗಿತ್ತು.

## ಶಾಲಾ ಸಮಿತಿಗಳು

ಪ್ರವೇಶಾತಿ, ಮಧ್ಯಾಹ್ನದ ಬಿಸಿಯೂಟ, ಗ್ರಂಥಾಲಯ, ಸುರಕ್ಷತೆ ಹಾಗೂ ಭದ್ರತೆ, ಚಟುವಟಿಕೆಗಳು ಹಾಗೂ ಆಚರಣೆಗಳು, ಬೆಳಗಿನ ಪ್ರಾರ್ಥನಾ ಸಭೆ ನಡೆಸುವುದು ಮುಂತಾದವುಗಳಿಗಾಗಿ ವಿವಿಧ ಸಮಿತಿಗಳನ್ನು ರಚಿಸಲಾಯಿತು. ಶಾಲೆಯ ಎಲ್ಲ ಪ್ರಕ್ರಿಯೆಗಳಲ್ಲಿ ಎಲ್ಲರೂ ಭಾಗಿಯಾಗುವಂತೆ ನೋಡಿಕೊಳ್ಳಲು, ಶಾಲೆಯ ಬಗ್ಗೆ ಸಕಾರಾತ್ಮಕ ಭಾವನೆಯನ್ನು ಬೆಳೆಸಿಕೊಳ್ಳಲು ಮತ್ತು ಎಲ್ಲರೂ ಒಗ್ಗೂಡಿ ಸಾಂಸ್ಥಿಕ ಸಂಸ್ಕೃತಿಯನ್ನು ರೂಪಿಸಲು ಶಿಕ್ಷಕರನ್ನು ಈ ಸಮಿತಿಗಳಿಗೆ ಸರದಿಯ ಆಧಾರದ ಮೇಲೆ ನೇಮಿಸಲಾಗುತ್ತಿತ್ತು.

ವಿದ್ಯಾರ್ಥಿಗಳು ಸಹ ಕೆಲವು ಸಮಿತಿಗಳ ಭಾಗವಾಗಿದ್ದರು. ಉದಾಹರಣೆಗೆ, ಗ್ರಂಥಾಲಯ ಸಮಿತಿಯ ಭಾಗವಾಗಿ, ಅವರು ಪುಸ್ತಕಗಳ ನಿರ್ವಹಣೆ ಮತ್ತು ಪುಸ್ತಕಗಳನ್ನು ಎರವಲು ನೀಡುವ ಪ್ರಕ್ರಿಯೆಯಲ್ಲಿ ಸಹಾಯ ಮಾಡುತ್ತಿದ್ದರು. ಮಧ್ಯಾಹ್ನದ ಬಿಸಿಯೂಟದ ಸಮಿತಿಯ ಭಾಗವಾಗಿ, ಅವರು ಆಹಾರವನ್ನು ಬಡಿಸುವುದು, ಊಟ ಮಾಡಿದ ಜಾಗ ಶುಚಿಗೊಳಿಸುವುದು ಮತ್ತು ಆಹಾರ ವ್ಯರ್ಥವಾಗದಂತೆ ನೋಡಿಕೊಳ್ಳುತ್ತಿದ್ದರು. ಶಾಲಾ ಪ್ರಕ್ರಿಯೆಗಳಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿಗಳಿಗೆ ತಮ್ಮ ಶಾಲೆಯನ್ನು ಹೇಗೆ ನಡೆಸಲಾಗುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಅವಕಾಶವಾಯಿತು. ಜವಾಬ್ದಾರಿಗಳನ್ನು ಹೊರಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಯಿತು. ಜವಾಬ್ದಾರಿಯುತ ನಡವಳಿಕೆಯ ನಿರೀಕ್ಷೆಗಳ ಬಗ್ಗೆ ಮತ್ತು ಎಲ್ಲರೊಂದಿಗೆ ಆರೋಗ್ಯಕರ ಸಂಬಂಧವನ್ನು ನಿಭಾಯಿಸಲು ತಾವು ಏನು ಮಾಡಬಹುದು ಎಂಬುದನ್ನು ವಿದ್ಯಾರ್ಥಿಗಳು ಅರಿತುಕೊಂಡರು.

## ಉಪಸಂಹಾರ

ಮೇಲಿನ ವಿವರಗಳು ಫೌಂಡೇಷನ್ ಶಾಲೆಗಳ ಆರಂಭಿಕ ವರ್ಷಗಳ ಅನುಭವವನ್ನು ಬಿಂಬಿಸುತ್ತವೆ. ಹೆಚ್ಚಿನ ಸಂಸ್ಥೆಗಳು ಆರಂಭಿಕ ಹಂತದಲ್ಲಿ ಇರುವಂತೆ ಶಾಲೆಗಳನ್ನು ಸ್ಥಾಪಿಸುವಾಗ– ಸೀಮಿತ ಸಂಪನ್ಮೂಲಗಳು ಮತ್ತು ಸೌಲಭ್ಯಗಳು ( ಆ ಸಮಯದಲ್ಲಿ ಹೆಚ್ಚಿನ ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವು), ವಿವಿಧ ಹಂತದ ಪ್ರಕ್ರಿಯೆಗಳನ್ನು ಆರಂಭಿಸುವುದು ಮತ್ತು ವಿವಿಧ ಹಿನ್ನೆಲೆಯಿಂದ ಬಂದ ಶಿಕ್ಷಕರೊಂದಿಗೆ ಕೆಲಸ ಮಾಡುವುದು– ಹೀಗೆ ಸಾಕಷ್ಟು ಸವಾಲುಗಳು ಎದುರಾದವು. ಈ ಶಾಲೆಗಳ ಆರಂಭಿಕ ವರ್ಷಗಳ ಅನುಭವಗಳು ಸಮಷ್ಟಿ ಹಿತವನ್ನು ಕಾಯುವಲ್ಲಿ ಪ್ರೇರಕ ಮತ್ತು ಪೂರಕವಾಗಬಲ್ಲ ಶಾಲಾ ಸಂಸ್ಕೃತಿಯನ್ನು ರಚಿಸುವುದರ ಮೇಲೆ ಕೇಂದ್ರೀಕರಿಸುವ ಪ್ರಾಮುಖ್ಯತೆಯನ್ನು ಒತ್ತಿಹೇಳುತ್ತವೆ, ಇಂಥ ಶಾಲಾ ಸಂಸ್ಕೃತಿಯ ಪರಿಣಾಮವಾಗಿ ಒಟ್ಟಾರೆ ಕಾರ್ಯಕ್ಷಮತೆ ಸುಧಾರಿಸುತ್ತದೆ. ಸರ್ವರ ಹಿತವನ್ನೂ ಬಯಸುವ ಸಂಸ್ಕೃತಿಯನ್ನು ರೂಪಿಸುವ ದೃಷ್ಟಿಕೋನವನ್ನು ಹಂಚಿಕೊಳ್ಳಲು ಶಾಲೆಗಳಲ್ಲಿ ತೊಡಗಿಸಿಕೊಂಡಿರುವ ಪ್ರತಿಯೊಬ್ಬರೂ ಒಗ್ಗೂಡುವ ಅಗತ್ಯವಿದೆ ಎಂಬುದು ಸ್ಪಷ್ಟವಾಗಿದೆ. ಮಕ್ಕಳು ಕಲಿಯಲು, ಸಾಧನೆಗೈಯ್ಯಲು ಮತ್ತು ಅಭಿವೃದ್ಧಿ ಹೊಂದಲು, ತಮ್ಮ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಂಡು ಹುರುಪಿನೊಂದಿಗೆ ಅಣಿಯಾಗಿರಬೇಕು. ನಾವು ಸುರಕ್ಷಿತರಾಗಿದ್ದೇವೆ, ನಮಗೂ ಬೆಲೆಯಿದೆ ಎಂದು ಅವರಿಗೆ ಅನಿಸಬೇಕು ಮತ್ತು ತಮ್ಮ ಬಗ್ಗೆ ಅವರಿಗೇ ವಿಶ್ವಾಸವಿರಬೇಕು. ಅವರ ಸುತ್ತಮುತ್ತ ಸಕಾರಾತ್ಮಕವಾದ ಆದರ್ಶ, ಮಾದರಿಗಳನ್ನು ಮುಂದಿಡುವ ಅಗತ್ಯವಿದೆ. ಹಾಗಾಗಿ ನಾವು ಶಿಕ್ಷಕರು ಸಖ್ಯದಿಂದಿದ್ದು ಘನತೆ ಕಾಪಾಡಿಕೊಳ್ಳುವಂತೆ ಸೂಕ್ತ ಪರಿಸರ ಸೃಷ್ಟಿಸಬೇಕಿದೆ. ಇದು ಸರ್ವರೂ ಒಪ್ಪುವ ನಂಬಿಕೆ, ಮೌಲ್ಯ, ಕಾಣ್ಕೆಯಂಥ ಸಂಸ್ಕೃತಿಯ ಪ್ರಮುಖ ಅಂಶಗಳನ್ನು ರೂಪಿಸುವಲ್ಲಿ ಮುಂದಡಿಯಿಡಲು ನೆರವಾಗುತ್ತದೆ.

## ಕೊನೆ ಟಿಪ್ಪಣಿಗಳು:

i Edgar Schein's Model of Organisational Culture

ii Gruenert, (2008) in School Climate and Culture, Strategy Brief, February 2016, Elisabeth Kane, Natalie Hoff, Ana Cathcart, Allie Heifner, Shir Palmon, Reece L. Peterson, University of Nebraska-Lincoln. p 1

iii Çakiroğlu, Ü., Akkan, Y., & Güven, B. (2012) in School climate and Culture - Elisabeth Kane *et al. ibid.* p 1

iv Kent Petersen and Terence Deal (2002)- The Shaping School Culture Fieldbook, The Jossey-Bass Education Series, Wiley Company. p 9

v Why School Is Important. https://www.waterburybridgetosuccess.org/why-is-school-important/



**ಅರುಣಾ ಜ್ಯೋತಿ** ಅವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಎಜುಕೇಶನ್‌ನಲ್ಲಿ ವಿಭಾಗದಲ್ಲಿ ಅಧ್ಯಾಪಕರಾಗಿದ್ದು, ಶಿಕ್ಷಕರಾಗಿ ದಶಕಗಳ ಕಾಲದ ಅನುಭವ ಹೊಂದಿದ್ದಾರೆ. ಚೆನ್ನೈನ ವಿಎಚ್‌ಎಸ್ (VHS) ಆಸ್ಪತ್ರೆಯಲ್ಲಿ ಕೌನ್ಸೆಲಿಂಗ್ ಮತ್ತು ವಿಶೇಷ ಅಗತ್ಯಗಳ ವಿಭಾಗದ ಮುಖ್ಯಸ್ಥರಾಗಿ ಕೆಲಸ ಮಾಡಿದ್ದಾರೆ ಮತ್ತು SNEHA (Centre for Slow Learners- ನಿಧಾನಗತಿಯಲ್ಲಿ ಕಲಿಯುವವರ ಕೇಂದ್ರ)ನಲ್ಲಿ ಸ್ವಯಂಸೇವಕರಾಗಿದ್ದಾರೆ. ಇವರು ದೇಶಾದ್ಯಂತ ಆರಂಭಿಸಿದ ಮೊದಲ ಆರು ಅಜೀಂ ಪ್ರೇಮ್‌ಜಿ ಶಾಲೆಗಳನ್ನು ಸ್ಥಾಪಿಸಿದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಶಾಲೆಗಳ ಕೇಂದ್ರ ತಂಡದ ಭಾಗವಾಗಿದ್ದರು. ಶಿಕ್ಷಕರ ವೃತ್ತಿಪರ ಅಭಿವೃದ್ಧಿ, ಪಠ್ಯಕ್ರಮದ ಅಭಿವೃದ್ಧಿ, ನಿರಂತರ ವ್ಯಾಪಕ ಮೌಲ್ಯಮಾಪನ (CCE), ಆರಂಭಿಕ ಬಾಲ್ಯ ಶಿಕ್ಷಣ (ECE), ವಿಶೇಷ ಮಕ್ಕಳ ಶಿಕ್ಷಣ ಮತ್ತು ಹದಿಹರೆಯಕ್ಕೆ ಸಂಬಂಧಿಸಿದ ಅಂಶಗಳಂತಹ ಕೆಲವು ವ್ಯವಸ್ಥೆಗಳು ಮತ್ತು ಹಲವು ಪ್ರಕ್ರಿಯೆಗಳನ್ನು ಶಾಲೆಗಳಲ್ಲಿ ಸ್ಥಾಪಿಸುವಲ್ಲಿ ವ್ಯಾಪಕವಾಗಿ ಕೆಲಸ ಮಾಡಿದ್ದಾರೆ. ಅವರನ್ನು aruna.v@apu.edu.in ಮೂಲಕ ಸಂಪರ್ಕಿಸಬಹುದು.



**ಶೋಭಾ ಲೋಕನಾಥನ್ ಕವೂರಿ** ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಬೆಂಗಳೂರು ಜಿಲ್ಲಾ ಸಂಸ್ಥೆಯ ಸದಸ್ಯರಾಗಿದ್ದಾರೆ. ಶಿಕ್ಷಕಿಯಾಗಿರುವ ಶೋಭಾ ಅವರು ರಾಜಸ್ಥಾನದಲ್ಲಿ ಶೈಕ್ಷಣಿಕ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಅವರು ದೇಶಾದ್ಯಂತ ಆರಂಭಿಸಿದ ಮೊದಲ ಆರು ಅಜೀಂ ಪ್ರೇಮ್‌ಜಿ ಶಾಲೆಗಳನ್ನು ಸ್ಥಾಪಿಸಿದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಶಾಲೆಗಳ ತಂಡದ ಭಾಗವಾಗಿದ್ದರು. ಇವರು ಈ ಶಾಲೆಗಳಲ್ಲಿ ಪಠ್ಯಕ್ರಮ ಅಭಿವೃದ್ಧಿ, ಶಿಕ್ಷಕರ ವೃತ್ತಿಪರ ಅಭಿವೃದ್ಧಿ ಮತ್ತು ಭಾಷಾ ಅಭಿವೃದ್ಧಿ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಕೆಲಸ ಮಾಡಿದ್ದಾರೆ. ಅವರನ್ನು shobha.kavoori@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಶ್ರೀನಿಧಿ ಅಡಿಗ** | ಪರಿಶೀಲನೆ: **ನಾಗಮಣಿ ಎಸ್.ಎನ್.**